MANUAL OF INSTRUCTIONS FOR GOVERNMENT OFFICERS IN CONNECTION WITH THE VILLAGE IMPROVEMENT SCHEME.

ಗ್ರಾಮಸುಧಾರಣೆಯ ಯೋಜನೆಯ ಸಂಬಂಧದಿಂದ ಸರಕಾರೀ ಅಮಲದಾರರಿಗೆ ಸೂಚನೆಗಳನ್ನು ಕೊಡುವ ಕೈಪಿಡಿಯು.

ಮುಲ್ಕಿ ಅಮಲದಾರನ ಅನೇಕ ಕರ್ತವ್ಯಗಳಲ್ಲಿ ಗ್ರಾಮಸುಧಾರಣೆಯು ಒಂದಾಗಿದೆ; ಕೆಲವು ಮುಲ್ಕಿ ಅಮಲದಾರರು ಇದನ್ನು ತಮ್ಮ ಮುಖ್ಯ ಕರ್ತವ್ಯವನ್ನಾಗಿ ಮಾಡುತ್ತಾರೆ. ಶಿಕ್ಷಣದೆ, ಒಕ್ಕಲತನದ, ಸಾರ್ವಜನಿಕ ಆರೋಗ್ಯದ, ಕೈಗಾರಿಕೆಗಳ, ಸಹಕಾರೀ ಮತ್ತು ಫಾರೆಸ್ಟ ಖಾತೆಗಳಂಥ ರಾಷ್ಟ್ರಸಂವರ್ಧನದ ಅಥವಾ ಲೋಕಕಲ್ಯಾಣ ಮಾಡುವ ಅನೇಕ ವಿಶಿಷ್ಟ ಸರಕಾರೀ ಖಾತೆಗಳು ಇದೇ ಉದ್ದೇಶವನ್ನು ನೆರವೇರಿಸುತ್ತಿವೆ. ಜಿಲ್ಲೆಯ ಮುಖ್ಯನಾದ ಕಲೆಕ್ಟರನು ತನ್ನ ಖಾತೆಯ ಮತ್ತು ಇತರ ಖಾತೆಗಳ ಪ್ರಯತ್ನಗಳನ್ನು ಸಂಘಟಿಸಿ ಅವುಗಳನ್ನು ಗ್ರಾಮಗಳಲ್ಲಿ ಒಟ್ಟಾಗಿ ಉಪಯೋಗಿಸುತ್ತಾನೆ. ಸದ್ಯದ ಯೋಜನೆಯು ಉದ್ದೇಶವು, ಈ ಪದ್ಧತಿಯನ್ನು ಬಲಗೊಳಿಸಿ ಸ್ಥಿರಗೊಳಿಸುವದೇ ಇದ್ದು, ಅದರ ಬದಲಾಗಿ ಬೇರೆ ಯಾವದೇ ವಿಧಾನವನ್ನು ಅಮಲಿನಲ್ಲಿ ತರುವದಾಗಿರುವದಿಲ್ಲ. ಅದು ಪರೀಕ್ಷಿಸಲ್ಪಟ್ಟ ಬಳಿಕ ಹಿತಕರವಾಗಿ ಕಂಡುಬಂದಿದೆಯೆಂಬದಕ್ಕೆ ಸದರಿ ಯೋಜನೆಯ ಸಂಬಂಧದಿಂದ ಬಂದಿರುವ ಅಭಿಪ್ರಾಯಗಳು ಸಾಕ್ಷಿಯಾಗಿವೆ.

ಸದ್ಯದ ಪದ್ಧತಿಯು ಯೋಗ್ಯವಿದ್ದರೂ, ಅದನ್ನು ಸುಧಾರಿಸಲಿಕ್ಕೆ ಬರುವಂತಿದೆಯೆಂಬದು ತೀರ ಸ್ಪಷ್ಟವದೆ. ಕೆಲಸದ ಅಖಂಡತೆಯನ್ನು ಕಾಯ್ದುಕೊಳ್ಳುವ ಬಗ್ಗೆ ಸಾಕಷ್ಟು ಸಾಧನಗಳು ಇಲ್ಲದ್ದರಿಂದ ಉತ್ಸಾಹವೂ ಒಳ್ಳೇ ಕೆಲಸವೂ ನಿರರ್ಥಕವಾಗಿ, ಒಂದು ಖಾತೆಯ ಕೆಲಸವು ಮತ್ತೊಂದು ಖಾತೆಗೆ ತಿಳಿಯದಂತಾಗಿದೆ. ಈ ಯೋಜನೆಯ ಉದ್ದೇಶವು, ಹೆಚ್ಚು ಒಳ್ಳೇ ದಿಶೆಯಿಂದಲೂ, ಹೆಚ್ಚು ಅಖಂಡವಾಗಿಯೂ, ಹೆಚ್ಚು ಸುಸಂಘಟಿತವಾಗಿಯೂ ಮಾಡಲ್ಪಡುವ ಕೆಲಸವನ್ನು ಪೂರೈಸುವದಾಗಿದೆ.

ಖಾಸಗಿ ಜನರ ಕೆಲಸವನ್ನು ಬೆಳಿಸಿ ಅದನ್ನು ಸಂಘಟಿಸುವಲ್ಲಿ ಸಹಾಯ ಮಾಡುವದು ಸದರಿ ಯೋಜನೆಯ ಮತ್ತೊಂದು ಉದ್ದೇಶವು. ಆದರೆ ಎಲ್ಲಕ್ಕೂ ಮಹತ್ವದ ಉದ್ದೇಶವು, ಗ್ರಾಮನಿವಾಸಿಗಳಲ್ಲಿ ಆತ್ಮಸುಧಾರಣೆಯ ಇಚ್ಛೆಯನ್ನುಂಟು ಮಾಡುವದಿರುತ್ತದೆ. ಈ ಸಂಗತಿಯಲ್ಲಿ ಖಾಸಗಿ ಜನರು ಅತಿ ಮಹತ್ವದ ಭಾಗವನ್ನು ವಹಿಸಬೇಕಾಗುವದು. ಆದರೆ ಖಾಸಗಿ ಜನರು, ಪ್ರಾರಂಭದಲ್ಲಿ, ಕೆಲ ಮಟ್ಟಿಗೆ ಸರಕಾರೀ ಸಹಾಯದ ಮೇಲೆ ಅವಲಂಬಿಸಲೇ ಬೇಕಾಗುವದು.

ಈ ಪ್ರಶ್ನದ ಅತಿ ಮಹತ್ವದ ಸ್ವರೂಪವು, ಗ್ರಾಮನಿವಾಸಿಯಲ್ಲಿ ಸುಧಾರಣೆಯ ಇಚ್ಛೆಯನ್ನುಂಟುಮಾಡುವದಾಗಿದ್ದರೂ, ಈ ಸಂಗತಿಯಲ್ಲಿ ಈ ವರೆಗೆ ದೊರೆತ ಯಶವು ಬಹಳ ಕಡಿಮೆಯಾಗಿದೆ. ಗ್ರಾಮನಿವಾಸಿಗಳಲ್ಲಿ ಜನಸೇವೆಯ ಮತ್ತು ಸ್ವಾವಲಂಬನದ ಬಗ್ಗೆ ಬೇಕಾದ ಹುರುಪನ್ನುಂಟುಮಾಡುವಲ್ಲಿ ಗ್ರಾಮ

ಪಂಚಾಯತಗಳಾಗಲಿ ಸಹಕಾರೀ ಸಂಘಗಳಾಗಲಿ ಈ ವರೆಗೆ ನಿಜವಾದ ಯಶವನ್ನು ಪಡೆಯಲಿಕ್ಕೆ ಅಸಮರ್ಥವಾಗಿವೆಯೆಂಬದು ಎಲ್ಲರಿಗೂ ಗೊತ್ತಿದೆ. ಆದರೆ ಗ್ರಾಮ ನಿವಾಸಿಗಳಲ್ಲಿ ಹೆಚ್ಚು ಒಳ್ಳೇ ಪ್ರವೃತ್ತಿಯುಂಟಾಗುವಂತೆ ಮಾಡುವಲ್ಲಿ ಸುಸಂಘಟಿತ ಪ್ರಯತ್ನಗಳೇನೂ ಈ ವರೆಗೆ ಮಾಡಲ್ಪಟ್ಟಿಲ್ಲ. ಸರಕಾರೀ ಅಮಲದಾರರು ಮತ್ತು ಸ್ಥಾನಿಕ ಮಂಡಳಗಳು ಸರಕಾರದವರಿಂದ ಹಣವನ್ನು ಪಡೆಯಲಿಕ್ಕೆ ಸಮರ್ಥರಾದರೆ ಮತ್ತು ಆ ಹಣದ ಉಪಯೋಗವನ್ನು ಯೋಗ್ಯವಾಗಿ ಮಾಡಿಕೊಂಡರೆ ಮಾತ್ರ ಅವರು ಯಶಸ್ವಿಯಾದರೆಂದು ಜನರು ತಿಳಿಯುವ ಸಂಭವವದೆ. ಅತ್ಯುತ್ತಮನಾದ ಕಲೆಕ್ಟರನು ಯಾವನು ಅಥವಾ ಅತ್ಯುತ್ತಮವಾದ ಸ್ಥಾನಿಕ ಮಂಡಳವು ಯಾವದು ಎಂಬದರ ನಿಜವಾದ ಪರೀಕ್ಷೆಯು, ಅವರ ಮುಖಾಂತರವಾಗಿ ಸರಕಾರದ ಖರ್ಚಿನಿಂದ ಎಷ್ಟು ಬಾವಿಗಳು ಅಗಿಯಲ್ಪಟ್ಟವು ಅಥವಾ ಎಷ್ಟು ಮೈಲು ರಸ್ತೆಗಳು ಮಾಡಲ್ಪಟ್ಟವು ಎಂಬದೇ ಇದ್ದ ಪಕ್ಷಕ್ಕೆ, ಈ ಯೋಜನೆಯಿಂದ ಯಾವ ಕಾರ್ಯವೂ ಆಗಲಾರದು; ಮತ್ತು ಸದರಿ ಯೋಜನೆಯನ್ನು ಅಮಲಿನಲ್ಲಿ ತರಲಿಕ್ಕೆ ಈಗಿನ ಕಾಲವು ಅತಿ ಅಯೋಗ್ಯವಾಗುವದು. ಆದರೆ, ಈ ಪ್ರಾಂತದಲ್ಲಿಯೂ ಇತರ ಪ್ರಾಂತಗಳಲ್ಲಿಯೂ ಗ್ರಾಮಸುಧಾರಣೆಯಾಗಬೇಕೆಂಬ ಹೊಸದಾದ ಇಚ್ಛೆಯುಂಟಾಗಲಿಕ್ಕೆ ಹಣದ ಕೊರತೆಯೇ ಕಾರಣವಾಗಿದೆಯೆಂಬದು ನಿಜವು. ಈ ಯೋಜನೆಯ ಉದ್ದೇಶವು, ಗ್ರಾಂಟುಗಳನ್ನು ಪಡೆಯುವ ಪ್ರಯತ್ನದ ಬದಲಾಗಿ ಭಾಗ ವಹಿಸುವ ಮತ್ತು ಸಹಾಯ ಮಾಡುವ ಇಚ್ಛೆಯನ್ನುಂಟುಮಾಡುವದಾಗಿದೆ. ಸ್ಥಾನಿಕ ಸ್ವಾವಲಂಬನದ ಪ್ರಮಾಣದ ಮೇಲೆಯೇ ಗ್ರಾಂಟುಗಳು ಅವಲಂಬಿಸುವದು ಸ್ವಾಭಾವಿಕವು, ಆದರೆ ಈ ಮಾರ್ಗದಿಂದ ಸಾಕಷ್ಟು ಪ್ರಗತಿಯಾಗಿಲ್ಲ. ಮಾಡಬೇಕಾದ ಕಾರ್ಯವು ಬಹಳ ವಿರುತ್ತದೆ. ಖಾಸಗಿ ಕೆಲಸಗಾರರು ಮತ್ತು ಖಾಸಗಿ ಜನರ ಮಂಡಳಗಳು ಒಟ್ಟುಗೂಡಿ ಕಲೆಕ್ಟರನ ಮುಖಾಂತರ ಸರಕಾರದ ಖಾತೆಗಳೊಡನೆ ಹೆಚ್ಚು ಒಳ್ಳೇ ರೀತಿಯಿಂದ ಸಹಕಾರ ಮಾಡಿದರೆ, ಈ ಕಾರ್ಯವನ್ನು ಬಹಳ ಬೇಗ ಕೊನೆಗಾಣಿಸಬಹುದು.

ಕೆಲಸದ ಮೂಲ ಉದ್ದೇಶವನ್ನು ಕೆಡಿಸದೆ ಅದನ್ನು ಚನ್ನಾಗಿ ಮಾಡುವದರ ಸಲುವಾಗಿ, ಅವಶ್ಯವಿರುವ ಸಂಘಟನೆಯ ವಿಶಿಷ್ಟ ಮಾದರಿಯನ್ನು ಮತ್ತು ಪ್ರಮಾಣವನ್ನು ಕುರಿತು ಇಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಪ್ರಶ್ನವು ಸುಲಭವಿರುವದಿಲ್ಲ, ಮತ್ತು ಅದನ್ನು ಕೈಕೊಳ್ಳುವಲ್ಲಿ ಬಹಳ ಜಾಗ್ರತೆಯನ್ನು ತೆಗೆದುಕೊಳ್ಳಬೇಕಾಗುವದು. ಒಂದು ಪಕ್ಷದಲ್ಲಿ, ಮಾಡಿದ ಕೆಲಸವನ್ನು ಮತ್ತೊಮ್ಮೆ ಮಾಡುವದನ್ನು ತಪ್ಪಿಸುವ ಉದ್ದೇಶದಿಂದಲಾದರೂ, ಅನುಭವವನ್ನು ಕೂಡಿ ಹಾಕಲಿಕ್ಕೂ, ಬೇರೆಯವರು ಏನು ಮಾಡುತ್ತಾರೆಂಬದು ಬೇರೆ ಬೇರೆ ಖಾತೆಗಳಿಗೆ ತಿಳಿದು ಬರುವಂತೆ ಮಾಡಲಿಕ್ಕೂ ಕೆಲಮಟ್ಟಿಗೆ ಸಂಘಟನೆಯು ಅವಶ್ಯವದೆ. ಮತ್ತೊಂದು ಪಕ್ಷದಲ್ಲಿ, ಅತೀವ ಸಂಘಟನೆಯಿಂದಾಗಲಿ ತಪ್ಪು ರೀತಿಯ ಸಂಘಟನೆಯಿಂದಾಗಲಿ ಉಂಟಾಗುವ ಪರಿಣಾಮಗಳನ್ನು ನಿವಾರಿಸುವದು ಈ ಯೋಜನೆಯ ಉದ್ದೇಶವಾಗಿದೆ. ತಮ್ಮ ತಮ್ಮ ಕಾರ್ಯಕ್ಷೇತ್ರದ ಮಟ್ಟಿಗೆ ವರ್ಗೀಕರಿಸಲ್ಪಟ್ಟ ಕೆಲಸಗಾರರ ಒಂದು ಪಂಗಡವನ್ನೇ ಉಂಟುಮಾಡುವದರಿಂದ ಕೆಲಸದ ಸೂತ್ರಗಳು ಕಾರ್ಯಕರ್ತರ ಕೈಯಲ್ಲಿಯೇ ಉಳಿದಂತಾಗುವದು; ಮತ್ತು ರಿಪೋರ್ಟುಗಳು ಮತ್ತು ಪತ್ರವ್ಯವಹಾರಗಳು ಕೂಡಿರುವ ಪ್ರಯಾಸದ ಪದ್ಧತಿಯನ್ನೊಂದು ಪ್ರಾರಂಭಿಸಿ ದಫ್ತರಿನ ಗಂಟುಗಳನ್ನು ಬೆಳಿಸಿದರೆ, ವಸ್ತುತಃ ಸರಕಾರದ ಒಂದು ಹೊಸ ಖಾತೆಯೇ ಉಂಟಾದಂತಾಗುವದು.

ಸದರಿ ಯೋಜನೆಯು ತಮ್ಮ ಸಹಾಯವಿಲ್ಲದೆ ನಿಜವಾದ ಚಟುವಟಿಕೆಗಳುಳ್ಳ ದ್ದಾಗಲಾರದೆಂದು ಯಾವತ್ತು ದರ್ಜೆಗಳ ಸರಕಾರೀ ಅಮಲದಾರರು ತಿಳಿಯಬೇಕು. ಆದಾಗ್ಯೂ, ಅವರು ತಮ್ಮ ಕೈಯಲ್ಲಿಯೇ ಯಾವತ್ತು ನಿರ್ಬಂಧವು ಉಳಿಯಬೇಕೆಂಬ ಉದ್ದೇಶದಿಂದ ಈ ಕೆಲಸವನ್ನು ಕೈಕೊಳ್ಳಬಾರದು, ಆದರೆ ಅವರು ಆಜ್ಞಾಪಿಸುವ ಇಚ್ಛೆ ಇಲ್ಲದೆ ಅಥವಾ ತಮಗೆ ಪ್ರಸಿದ್ಧಿಯು ದೊರೆಯಬೇಕೆಂಬ ಇಚ್ಛೆ ಇಲ್ಲದೆ ಪೂರ್ಣ ದರ್ಶಕರಾಗಿ ಸಹಾಯ ಮಾಡತಕ್ಕದ್ದು.

ಅಮಲದಾರರು ಪ್ರಾರಂಭದ ಹಂಚಿಕೆಯನ್ನು ಮಾಡುವದಕ್ಕೆ ನಿರ್ಬಂಧವು ಹಾಕಲ್ಪಡಬೇಕೆಂದು ಇಚ್ಛೆ ಇರುವದಿಲ್ಲ. ಹೊಸ ಯೋಜನೆಗಳ ಸಂಬಂಧದ ಸೂಚನೆಗಳು ಸಂತೋಷದಿಂದ ಬರಮಾಡಲ್ಪಡುವವು ಮತ್ತು ಅವುಗಳ ಬಗ್ಗೆ ಕಾಳಜಿಪೂರ್ವಕವಾಗಿ ವಿಚಾರವು ಮಾಡಲ್ಪಡುವದು.

ಮಾಡಲ್ಪಟ್ಟ ಕೆಲಸದ ವಿಷಯದಲ್ಲಿ ಅಮಲದಾರರು ಮಾಡಿದ ರಿಪೋರ್ಟು ಗಳು ಸಂಕ್ಷಿಪ್ತವಾಗಿರಬೇಕು, ಮತ್ತು ಅವುಗಳಲ್ಲಿ, ಅತಿ ಪ್ರಶಂಸೆಗಾಗಲಿ ದೋಷಾ ರೋಪಣೆಗಾಗಲಿ ಅವಕಾಶವಿರಬಾರದು. ಯತ್ನಿಸಲ್ಪಟ್ಟ ಯಾವತ್ತು ಕೆಲಸಗಳ ವಿಧಾನಗಳನ್ನು ಅವುಗಳಲ್ಲಿ ವಿವರಿಸಿರಬೇಕು. ಯಶಸ್ಸಿನಂತೆಯೇ ಅಪಯಶಸ್ಸಿ ನಿಂದಲೂ ನಾವು ಬುದ್ಧಿಯನ್ನು ಕಲಿಯಬಹುದು.

ಕಮಿಶನರರು ಮತ್ತು ಕಲೆಕ್ಟರರು ತಮ್ಮ ರಿಪೋರ್ಟುಗಳು ಹುಕುಮುಗಳಾಗಿ ಎಣಿಸಲ್ಪಡಬೇಕೆಂದು ಅಪೇಕ್ಷಿಸಬಾರದು. ಅವರು ಎಲ್ಲ ಕಡೆಯಿಂದ ಸಂಗ್ರಹಿಸ ಲ್ಪಟ್ಟ ಅನುಭವವನ್ನು ಯಾವತ್ತು ಗ್ರಾಮದ ಕೆಲಸಗಾರರ ಮುಂದೆ ಇಡಲಿಕ್ಕೆ ಯತ್ನಿಸತಕ್ಕದ್ದು.

ಅಡಚಣಿಗಳು ಬಂದೇ ಬರುವವು, ಮತ್ತು ತಾಳ್ಮೆಯಿಂದಲೂ, ಇತರ ಕಡೆ ಯಲ್ಲಿ ಮಾಡಲ್ಪಡುವ ಕೆಲಸದ ಪರಿಶೀಲನದಿಂದಲೂ ಈ ಅಡಚಣಿಗಳನ್ನು ನಿವಾರಿಸ ಬಹುದು.

ತನ್ನ ವ್ಯವಹಾರಗಳನ್ನು ತಾನೇ ಮಾಡುವ ಮತ್ತು ತನ್ನ ಸುಧಾರಣೆಗಾಗಿ ತನ್ನ ಇಚ್ಛೆಯಿಂದಲೇ ಹೆಚ್ಚು ಹೆಚ್ಚು ಒಳ್ಳೇ ಕಾರ್ಯಗಳನ್ನು ಮಾಡುವ ಮಾದರಿಯ ಗ್ರಾಮವೇ, ಗವ್ಹರ್ನರ ಸಾಹೇಬರವರು ಆಗಾಗ್ಗೆ ಒತ್ತಿ ಹೇಳಿದಂತೆ, ಸದರಿ ಯೋಜ ನೆಯ ಕೊನೆಯ ಧ್ಯೇಯವಾಗಿದೆ; ಅಂದರೆ, ಪ್ರಾರಂಭದಲ್ಲಿ ಕೆಲಸ ಮಾಡಲಿಕ್ಕೆ ವಿಶಿಷ್ಟ ಮಾದರಿಯ ಕೆಲಸಗಾರರ ದೊಡ್ಡ ಸಂಖ್ಯೆಯನ್ನು ಸೇರಿಸಿಕೊಳ್ಳಬೇಕಾದರೂ ಮುಂದೆ ಅವರ ಸಹಾಯವಿಲ್ಲದೆ ಚಳವಳಿಯನ್ನು ನಡಿಸಲಿಕ್ಕೆ ಸಮರ್ಥವಾಗುವ ಗ್ರಾಮವೇ ಮೇಲೆ ಹೇಳಿದ ಮಾದರಿಯ ಗ್ರಾಮವು. ಇದರ ಮೇಲಿಂದ ಹೊರ ಡುವ ಸಿದ್ಧಾಂತವೇನೆಂದರೆ, ಪ್ರಾರಂಭದಿಂದಲೇ, ಈ ಧ್ಯೇಯಕ್ಕೆ ಆದಷ್ಟು ಮಟ್ಟಿಗೆ ಹೋಲುವ ಕೆಲಸವೇ ಸದರಿ ಗ್ರಾಮದ ಬಗ್ಗೆ ಅವಶ್ಯವಿರುವ ಅತ್ಯುತ್ತಮ ಕೆಲಸ ವಾಗುವದು. ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವದಾದರೆ, ಯಾವ ಗ್ರಾಮವು ಹೊರಗಿನ ಯಾವದೇ ಸಹಾಯ ಪಡೆಯದೆ ತನ್ನ ಸುಧಾರಣೆಯ ಕೆಲಸವನ್ನು ಕೈಕೊಳ್ಳಲಿಕ್ಕೆ ಸಮರ್ಥವಿರುವದೋ ಅಂಥ ಗ್ರಾಮವು ವಿಶೇಷ ಸ್ತೋತ್ರಾರ್ಹವಾಗಿದೆ. ಒಟ್ಟಿನ ಮೇಲೆ, ಪ್ರತಿಯೊಂದು ಗ್ರಾಮವು, ತನ್ನ ಒಳಗಿನ ಜೀವನಕ್ಕೆ ಸಂಬಂಧಿಸುವ ಮಟ್ಟಿಗೆ, ತನ್ನ ವಿಶಿಷ್ಟ ಪರಿಸ್ಥಿತಿಗಳನ್ನು ಮತ್ತು ಪ್ರಶ್ನೆಗಳನ್ನು ಒಳಗೊಂಡ ಒಂದು ಸ್ವಾವಲಂಬಿಯಾದ ಘಟಕವಾಗಿದೆ, ಮತ್ತು ಸದರಿ ಗ್ರಾಮವನ್ನು ಯಾವದೊಂದು

ಸಂಘಟನೆಯಲ್ಲಿ ಬಲಾತ್ಕಾರದಿಂದ ಸೇರಿಸುವದು, ಸಾಮೂಯಿಕ ಮೂರಾಟದ ಮಧ್ಯ ಸ್ಥಳಗಳನ್ನು ಸ್ಥಾಪಿಸುವಂಥ ಸಂಘಟನೆಯ ಅವಶ್ಯಕತೆಯ ಪ್ರಶ್ನವು ಹೊರಟ ಹೊರ್ತು, ಎಂದಿಗೂ ಅವಶ್ಯವಾಗಲಾರದು. ಸಾಧನವನ್ನೇ ಸಾಧ್ಯವೆಂದು ತಿಳಿಯುವದನ್ನು ನಾವು ತಪ್ಪಿಸಬೇಕು, ಮತ್ತು ಕೆಲವು ಕೆಲಸಗಾರರಿಗೆ ಗ್ರಾಮ ಸುಧಾರಣೆಯ ಪ್ರಾರಂಭಾವಸ್ಥೆಯಲ್ಲಿ ಹೊರಗಿನ ಸಂಘಟಿತ ಸಹಾಯವು ಅವಶ್ಯ ತೋರಬಹುದೆಂಬ ಕಾರಣದಿಂದಲೇ, ಗ್ರಾಮಗಳನ್ನು ಸಂಖ್ಯೆಯಲ್ಲಿ ಬೆಳೆಯುತ್ತ ಹೋಗುವ ಗುಂಪುಗಳ ಸಂಘಟನೆಯಲ್ಲಿ ಕಾಯಮುವಾಗಿ ಸೇರಿಸಬೇಕೆಂಬ ಗ್ರಹಿಕೆ ಯನ್ನು ಸಹ ತಪ್ಪಿಸಬೇಕು. ಇದನ್ನು ಬೇರೆ ರೀತಿಯಿಂದ ಹೇಳುವದಾದರೆ, ನಮ್ಮ ಧ್ಯೇಯವನ್ನು ನಾವು ಮುಟ್ಟಬೇಕಾದರೆ, ನಾವು ವಿಶಿಷ್ಟ ರೀತಿಯಿಂದಲೇ ಸಾಗಬೇಕಲ್ಲದೆ ಸಾಮಾನ್ಯ ರೀತಿಯಿಂದಲ್ಲ; ಮತ್ತು ಮಧ್ಯಸ್ಥಳದಲ್ಲಿ ಕುಳಿತು ಸಾಮುದಾಯಿಕ ರೀತಿಯಿಂದ ಗ್ರಾಮಗಳ ಕಾರ್ಯಕ್ರಮವನ್ನು ಕ್ರಮಪಡಿಸಿ ಮತ್ತು ಅದರಿಂದ ಕೆಲಸ ವನ್ನು ಪ್ರಮಾಣಭೂತವಾದ ಪಡಿಯಚ್ಚಿನಲ್ಲಿ ಹೊಯ್ಯಲಿಕ್ಕೆ ಪ್ರಯತ್ನ ಮಾಡುವಂಥ ಯಾವದೇ ಸಂಘಟನಾ ಮಂಡಳವು, ನಮ್ಮ ಕೊನೆಯ ಧ್ಯೇಯದ ವಿರುದ್ಧ ದಿಕ್ಕಿಗೆ ನಮ್ಮನ್ನು ಒಯ್ಯುವದು.

ಮತ್ತು ಇದರಿಂದ, ಸದ್ಯದ ಹಂಚಿಕೆಯಂತೆ ಯೋಚಿಸಲ್ಪಟ್ಟ ಸಂಘಟನೆಯ ಸಾಧನಗಳ ಬಗ್ಗೆ ವಿಚಾರವು ಹೊರಡುವದು ಸ್ವಾಭಾವಿಕವು. ಸೂಚಿಸಲ್ಪಟ್ಟ ಇಂಥ ಎರಡು ಮಧ್ಯವರ್ತಿ ಮಂಡಳಗಳ ಪೈಕಿ ಒಂದು ಜಿಲ್ಲೆಗಳ ಸಲುವಾಗಿಯೂ ಮತ್ತೊಂದು ಭಾಗಗಳ ಸಲುವಾಗಿಯೂ ಇರುತ್ತದೆ. ಜಿಲ್ಲೆಗಳಲ್ಲಿ, ಕಾರ್ಯಕ್ಷಮ ವಾಗಿ ಸಂಘಟನೆ ಮಾಡುವ ಮಂಡಳವು ಜಿಲ್ಲಾ ಕಾರ್ಯಕಾರಿ ಕಮಿಟಿಯಾಗಿದ್ದು, ಅದರ ಚೆಅರಮನ್ನನು ಕಲೆಕ್ಟರನಾಗುವನು. ಭಾಗಗಳಲ್ಲಿ, ಕಾರ್ಯಕ್ಷಮವಾಗಿ ಸಂಘಟನೆ ಮಾಡುವ ಮಂಡಳವು ಭಾಗದ ಕಾರ್ಯಕಾರಿ ಕಮಿಟಿಯಾಗಿದ್ದು, ಅದರ ಚೆಅರಮನ್ನನು ಕಮಿಶನರನಾಗುವನು, ಮತ್ತು ಅವನು ತನ್ನ ಬಲಗೈಯೆಂತಲೂ ಪ್ರತಿನಿಧಿಯೆಂತಲೂ ನೇಮಿಸಲ್ಪಟ್ಟ ಒಬ್ಬ ವಿಶಿಷ್ಟ ಗ್ರಾಮಸುಧಾರಣೆಯ ಅಮಲ ದಾರನ ಮುಖಾಂತರವಾಗಿ ಕೆಲಸ ಮಾಡುವನು. ಈ ಅಮಲದಾರನ ಕರ್ತವ್ಯ ವೆಂದರೆ, ಸಮಗ್ರ ಭಾಗದೊಳಗಿನ ಕೆಲಸಗಾರರ ಕಡೆಯಿಂದ ರಿಪೋರ್ಟುಗಳನ್ನು ಪಡೆಯುವದು, ಇವುಗಳನ್ನು ಒಟ್ಟುಗೂಡಿಸುವದು ಮತ್ತು ಕಮಿಶನರನ ವತಿಯಿಂದ ತಾನಾಗಿ ಒಂದು ಒಟ್ಟು ರಿಪೋರ್ಟನ್ನು ಪ್ರಸಿದ್ಧಿಸುವದು; ಮತ್ತು ಈ ರಿಪೋರ್ಟಿನಲ್ಲಿ ಸಂಗ್ರಹಿಸಲಾದ ಜ್ಞಾನದ ಮತ್ತು ಮಾಹಿತಿಯ ಲಾಭವನ್ನು ಭಾಗದಲ್ಲೆಲ್ಲ ಕೆಲಸ ಮಾಡುವ ಕೆಲಸಗಾರರು ಮಾಡಿಕೊಳ್ಳುವರು. ಈ ವ್ಯವಸ್ಥೆಯಲ್ಲಿ ಸಹಾಯಕರ ವಾಗಬಹುದಾದ ಅನೇಕ ಸಂಗತಿಗಳಿರುತ್ತವೆ; ಆದರೆ ಈ ವ್ಯವಸ್ಥೆಯನ್ನು ಯೋಗ್ಯ ರೀತಿಯಿಂದ ಕೊನೆಗಾಣಿಸಬೇಕಾದ ಪಕ್ಷಕ್ಕೆ, ಇಂಥ ಕೇಂದ್ರೀಕರಣದಿಂದ ವಿಶಿಷ್ಟ ಸ್ವರೂಪದ ಕೆಲಸವಾಗುವದರ ಬದಲಾಗಿ ಸಾಮಾನ್ಯ ಸ್ವರೂಪದ ಕೆಲಸವಾಗದಂತೆ ಸತತವಾಗಿ ಕಾಳಜಿ ತೆಗೆದುಕೊಳ್ಳುವ ವ್ಯವಸ್ಥೆ ಇರತಕ್ಕದ್ದು. ವಿಶಿಷ್ಟ ಸ್ಥಳದ ವಿಶಿಷ್ಟ ಗರಜುಗಳಿಂದ ಅವಶ್ಯತೋರಬಹುದಾದ ಕೆಲಸದ ಸ್ಥಾನವನ್ನು 'ಸಂಘಟಿತ' ಕೆಲಸದ ಯೋಜನೆಗಳು ಆಕ್ರಮಿಸುವ ಭಯವೂ, ಇದರ ಮೂಲಕ ಸಮಗ್ರ ಚಳವಳಿ ಯಲ್ಲಿಯ ಹುರುಪೂ ಚಪಲತೆಯೂ ಕಳೆದು ಹೋಗುವ ಭಯವೂ ಇದ್ದೇ ಇರು ವವು, ಮತ್ತು ಇದಲ್ಲದೆ, ಭಾಗದೊಳಗಿನ ಸರಕಾರೀ ನೌಕರರು ಸದರಿ ವಿಶಿಷ್ಟ ಅಮಲದಾರನ ಸೂಚನೆಗಳನ್ನು ಕಮಿಶನರನ ಇಚ್ಛೆಗಳೆಂದು ತಿಳುಕೊಂಡರೆ,

ಇದಕ್ಕೂ ಹೆಚ್ಚಿನ ಅಪಾಯವಾಗಬಹುದು. ಸದರಿ ವ್ಯವಸ್ಥೆಯಿಂದ ಇಂಥ ಪರಿಣಾಮವಾದರೆ, ಸಂಘಟನೆಯಿಂದ ಸಹಾಯವಾಗುವದರ ಬದಲಾಗಿ ಅಪಾಯವು ಸಂಭವಿಸುವದು. ಆದದರಿಂದ, ವಿಶಿಷ್ಟ ಅಮಲದಾರನು ವೈಯಕ್ತಿಕ ಕೆಲಸಗಾರನ ಸ್ವಾತಂತ್ರ್ಯದ ಮೇಲೆ ಯಾವದೇ ತರದ ನಿರ್ಬಂಧವನ್ನು ಹೊರಿಸದಂತೆ ಮಾಡುವ ಬಗ್ಗೆ ಅವನ ಕರ್ತವ್ಯಗಳನ್ನು ನಿರ್ಬಂಧಗೊಳಿಸುವದು ಅತ್ಯಾವಶ್ಯಕವು. ಉದಾಹರಣಾರ್ಥವಾಗಿ, ಅವನು ಹೊರಗಿನಿಂದ ರಿಪೋರ್ಟುಗಳನ್ನು ಪಡೆಯಲಿಕ್ಕೆ ಅಥವಾ ತಾನಾಗಿ ಒಂದು ರಿಪೋರ್ಟನ್ನು ಪ್ರಸಿದ್ಧಿಸಲಿಕ್ಕೆ ಯಾವದೇ ಅಡ್ಡಿ ಇರುವದಿಲ್ಲ, ಆದರೆ ಅವನು ಮೊದಲನೇ ಬಾಬತಿನಲ್ಲಿ ತನ್ನ ಕಡೆಗೆ ಯೋಗ್ಯವಾದ ರಿಪೋರ್ಟುಗಳು ಮಾತ್ರ ಬರುವಂತೆ ಕಾಳಜಿ ತೆಗೆದುಕೊಳ್ಳಬೇಕು, ಮತ್ತು ಎರಡನೇ ಬಾಬತಿನಲ್ಲಿ ಅವನು ಆಜ್ಞಾಪಕ ಪ್ರವೃತ್ತಿಯನ್ನು ತಾಳಬಾರದು. ಒಟ್ಟಿನ ಮೇಲೆ, ಅವನು ಬರೇ ಮಾಹಿತಿ ಕೊಡುವ ಅಮಲದಾರನಾಗಿರಬೇಕು. ಅವನು ಚಳವಳಿಯ ಸಂಬಂಧದ ಸುದ್ದಿಗಳನ್ನು ಮತ್ತು, ತನ್ನೊಡನೆ ಪತ್ರವ್ಯವಹಾರ ಮಾಡುವವರು ತನಗೆ ತಿಳಿಸಿದ ಮನೋರಂಜಕವಾದ ಯಾವವಾದರೂ ಸಂಗತಿಗಳನ್ನು ಅಥವಾ ಸೂಚನೆಗಳನ್ನು ಪ್ರಸಿದ್ಧಿಸಬಹುದು; ಆದರೆ ಅವನು ಎಂದೂ ಸದರಿ ಚಳವಳಿಯ ಸೂತ್ರಧಾರನಾಗಿರಬಾರದು. ಮತ್ತು ಇದೇ ಮಾತು, ತಮ್ಮ ತಮ್ಮ ಜಿಲ್ಲೆಗಳಲ್ಲಿ ಈ ಚಳವಳಿಯ ವಿಷಯದಲ್ಲಿ ಸರಕಾರೀ ರೀತಿಯಿಂದ ಮುಖ್ಯರಾದ ಕಲೆಕ್ಟರರಿಗೂ ಲಾಗೂ ಇರುತ್ತದೆ. ಅವರ ಪರಿಸ್ಥಿತಿಯು ತೊಡಕಿನದಾಗುವದು; ಆದರೆ, ಬೇರೆ ಸಂದರ್ಭದಲ್ಲಿ ಅವರಿಗಿರುವ ಅಮಲಬಜಾವಣೆಯ ಅಧಿಕಾರವನ್ನು ಅವರು ಈ ಚಳವಳಿಯ ಸಂಬಂಧದಿಂದ ಬಜಾಯಿಸಿ ಸದರಿ ಚಳವಳಿಯ ಮಹತ್ವದ ಸ್ವರೂಪವನ್ನು ಕೆಡಿಸಬಾರದು.

ಒಟ್ಟಿನ ಮೇಲೆ, ಸದರಿ ಚಳವಳಿಯ ಕೆಲಸವನ್ನು ಪ್ರಾರಂಭಿಸಲಿಕ್ಕೆ ಅವಶ್ಯವಿರುವ ಮುಖ್ಯ ಸಂಗತಿಗಳೆಂದರೆ, ಸಹಾಯ ಮಾಡುವ ಇಚ್ಛೆಯುಳ್ಳ ಜನರು ಮುಂದೆ ಬರಬೇಕು, ಮತ್ತು ಇಂಥ ಯಾರಾದರೂ ಜನರು ವೈಯಕ್ತಿಕವಾಗಿಯಾಗಲಿ ಸಾಮಾಯಿಕವಾಗಿಯಾಗಲಿ ಯಾವದೇ ಸ್ಥಳದಲ್ಲಿ ಯಾವದೊಂದು ಕೆಲಸವನ್ನು ಮಾಡಲಿಕ್ಕೆ ನಿಶ್ಚಯ ಮಾಡಿದ ಬಳಿಕ, ಯಾವ ಕೆಲಸವನ್ನು ಮಾಡಬೇಕು ಮತ್ತು ಅದನ್ನು ಹ್ಯಾಗೆ ಪ್ರಾರಂಭಿಸಬೇಕು ಎಂಬ ಸಂಗತಿಯು ಅವರಿಗೆ ಗೊತ್ತಿರಬೇಕು. ತಜ್ಞ ಸಲಹೆಯು ಎಲ್ಲಕ್ಕೂ ಮೊದಲು ಬೇಕಾಗಿರುವ ವಿಷಯವು; ಮತ್ತು ಇಂಥ ಸಲಹೆಯು ಎಲ್ಲೆಲ್ಲಿ ಮತ್ತು ಯಾವಾಗ ಬೇಕಾಗಿರುವದೋ ಅಲ್ಲಲ್ಲಿ ಆಗಾಗ್ಯೆ ಅದು ಎಲ್ಲರಿಗೂ ಸುಲಭವಾಗಿ ದೊರೆಯುವಂತಿರಬೇಕು. ತಜ್ಞ ಖಾತೆಗಳ ಕೆಲಸವು ಈ ಸಂದರ್ಭದಲ್ಲಿ ಉಪಯೋಗ ಬೀಳುತ್ತದೆ; ಮತ್ತು ಇಂಥ ತಜ್ಞ ಅಭಿಪ್ರಾಯವನ್ನು ಕೊಡಬೇಕಾದರೆ, ಇಂಥ ಪ್ರತಿಯೊಂದು ಖಾತೆಯು ಅತಿ ಸಂಕ್ಷಿಪ್ತ ಮತ್ತು ಸುಲಭವಾದ ಚಿಕ್ಕ ಪುಸ್ತಕಗಳನ್ನು ಪ್ರಸಿದ್ಧಿಸಬೇಕು, ಮತ್ತು ಇಂಥ ಪ್ರತಿಯೊಂದು ಚಿಕ್ಕ ಪುಸ್ತಕದಲ್ಲಿ, ಆಯಾ ಖಾತೆಯ ಕಾರ್ಯಕ್ಷೇತ್ರದ ಕೆಳಗೆ ಬರುವ ಗ್ರಾಮಸುಧಾರಣೆಯ ವಿಷಯದ ಒಂದೊಂದು ವಿಶಿಷ್ಟ ವಿಧಾನವನ್ನು ವಿವರಿಸಿರಬೇಕು. ಪ್ರಾರಂಭಕ್ಕೆ, ಒಕ್ಕಲತನ, ಪಬ್ಲಿಕ್ ವರ್ಕ್ಸ್ ಮತ್ತು ಶಿಕ್ಷಣ ಖಾತೆಗಳು ಇಂಥ ಹನ್ನೆರಡು ಚಿಕ್ಕ ಪುಸ್ತಕಗಳನ್ನು ಪ್ರಸಿದ್ಧಿಸಿದರೆ ಸಾಕಾಗುವದು, ಮತ್ತು ಇಷ್ಟಾದ ಬಳಿಕ ಈ ಪುಸ್ತಕಗಳನ್ನು ಹಂಚುವ ವ್ಯವಸ್ಥೆ ಮಾಡಬೇಕು, ಮತ್ತು ಇವುಗಳು ಯಾರಿಗೆ ಬೇಕಾಗಿರುವವೋ ಅಂಥ ಕೆಲಸಗಾರರಿಗೆ ಅವುಗಳು ಸುಲಭವಾಗಿಯೂ ಯೋಗ್ಯವಾಗಿಯೂ ದೊರೆಯುವ ವ್ಯವಸ್ಥೆಯಾಗಬೇಕು.

ಇಡೀ ಇಲಾಖೆಯೊಳಗಿನ ಯಾವತ್ತು ಕೆಲಸಗಾರರಿಗೆ ಈ ಮೇರೆಗೆ ತಜ್ಞ ಸಲಹೆಯು ಸುಲಭವಾಗಿ ದೊರೆತರೆ, ನಿಜವಾದ ಸಂಘಟನೆಯನ್ನು ಮಾಡಿದಂತಾಗುವದು, ಮತ್ತು ಅದು ಯಾವದೇ ಜಾಣತನದ ಸಂಘಟನೆಯ ಯೋಜನೆಯ ಮುಖ್ಯ ಅಂಗವಾಗುವದು; ಯಾಕೆಂದರೆ, ಇದರಲ್ಲಿ ನಿಜವಾಗಿ ಭದ್ರವಾಗಿದ್ದು ರಚನಾತ್ಮಕವಲ್ಲದ ಮಾದರಿಯ ಒಂದೇ ಒಂದು ಸಂಘಟನೆಯು ಇರುವದು. ಇನ್ನೂ ಮುಂದೆ ಸಾಗಿ ನಿಜವಾದ ಕೆಲಸವನ್ನಾಗಲಿ ಕೆಲಸಗಾರರನ್ನಾಗಲಿ ಸಂಘಟಿಸಿದ ಪಕ್ಷಕ್ಕೆ, ನಾವು ಅಪಾಯದ ಪ್ರದೇಶದಲ್ಲಿ ಕಾಲಿಟ್ಟಂತಾಗುವದು. ಇದಕ್ಕೂ ಮುಂದೆ ಸಾಗಿ, ಯಾವತ್ತು ಕೆಲಸಗಾರರನ್ನು ಬದ್ಧರನ್ನಾಗಿ ಮಾಡುವ ಉದ್ದೇಶದಿಂದ ಅಧಿಕಾರಯುಕ್ತವಾದ ಸಾಮಾಯಿಕ ಹುಕುಮುಗಳನ್ನು ಹೊರಡಿಸಿದ ಪಕ್ಷಕ್ಕೆ, ಸದರಿ ಯೋಜನೆಯ ಮೂಲೋದ್ದೇಶವನ್ನೇ ಬಿಟ್ಟು ನಡೆದಂತಾಗುವದು.

ಒಟ್ಟಿನ ಮೇಲೆ, ಗ್ರಾಮಸುಧಾರಣೆಯ ಸಂಬಂಧದ ಕಾರ್ಯಕ್ಷಮವಾದ ಸಂಘಟನೆಯೆಂದರೆ, ಮಾಹಿತಿಯನ್ನು ಸಂಘಟಿತವಾಗಿ ಪೂರೈಸುವದಾಗಿದೆ, ಮತ್ತು ಇಂಥ ಮಾಹಿತಿಯು, ಉಪಯುಕ್ತವಾದ ಸುದ್ದಿಗಳ ರೂಪದಲ್ಲಿ, ಮತ್ತು ಕೆಲಸಗಾರರಿಗೆ ಮಾರ್ಗದರ್ಶಕವಾಗುವಂತೆ ಮತ್ತು ಸಹಾಯಕರವಾಗುವಂತೆ ಕೆಲಸಗಳನ್ನು ತಜ್ಞ ರೀತಿಯಿಂದ ಹ್ಯಾಗೆ ಮಾಡಬೇಕೆಂಬ ಜ್ಞಾನದ ರೂಪದಲ್ಲಿ ಇರತಕ್ಕದ್ದು. ಸರಕಾರೀ ಅಮಲದಾರರ ಕರ್ತವ್ಯವೆಂದರೆ, (೧) ಅವರು ಈ ಮೇರೆಗೆ ಸುದ್ದಿಗಳನ್ನು ಪ್ರಸಿದ್ಧ ಪಡಿಸುವದು ಮತ್ತು ತಜ್ಞ ಆಲೋಚನೆಯನ್ನು ಕೊಡುವದು ಮತ್ತು (೨) ಅವರು, ತಮಗೆ ಅವಕಾಶ ದೊರೆತಂತೆ, ಈ ಕೆಲಸವನ್ನು ಕೈಕೊಳ್ಳಲಿಕ್ಕೆ ಖಾಸಗಿ ಮಂಡಳಗಳಿಗೂ ವ್ಯಕ್ತಿಗಳಿಗೂ ಪ್ರೋತ್ಸಾಹನ ಕೊಡುವದು ಇರುತ್ತದೆ.

ಆದಾಗ್ಯೂ, ಇವೆಲ್ಲವುಗಳಿಗಿಂತ ಹೆಚ್ಚು ಮಹತ್ವದ ಮತ್ತೊಂದು ಸಂಗತಿಯಿರುತ್ತದೆ. ಸದ್ಯಕ್ಕೆ, ಹಿಂದುಸ್ಥಾನದ ಗ್ರಾಮಗಳು ಯಾವ ದೋಷಗಳ ಮತ್ತು ಹುಚ್ಚು ವಿಚಾರಗಳ ಮೂಲಕ ಹಿಂದೆ ಬಿದ್ದಿರುವವೋ ಅಂಥ ದೋಷ ಮತ್ತು ಹುಚ್ಚು ವಿಚಾರಗಳು ಸರಕಾರೀ ಅಮಲದಾರನಲ್ಲಿ ಮನೆಮಾಡಿದ ಪಕ್ಷಕ್ಕೆ, ಸರಕಾರೀ ಪ್ರೋತ್ಸಾಹನವೆಲ್ಲವೂ ನಿರರ್ಥಕವಾಗುವದು. ಈ ಹೊತ್ತಿನಿಂದ ಪ್ರತಿಯೊಬ್ಬ ಸರಕಾರೀ ನೌಕರನ ಮುಖ್ಯ ಕರ್ತವ್ಯವು, ಕೆಲಸಗಾರರಿಗೆ ಮಾದರಿ ಹಾಕಿ ಕೊಡುವದಾಗಿರುತ್ತದೆ. ಗ್ರಾಮಸುಧಾರಣೆಯ ಕಾರ್ಯವು ಪ್ರಾರಂಭಿಸಲ್ಪಟ್ಟ ಮೂಲಕ, ಪ್ರತಿಯೊಬ್ಬ ಅಮಲದಾರನು, ತಾನು ಎಷ್ಟೇ ಕಡಿಮೆ ದರ್ಜೆಯವನಿದ್ದರೂ, ಗ್ರಾಮಸುಧಾರಣೆಯ ಕಾರ್ಯವನ್ನು ಇನ್ನು ಮುಂದೆ ಕೈಕೊಳ್ಳಬಹುದಾದ ಯಾವನೇ ಮನುಷ್ಯನಿಗೆ ಅಡ್ಡಿಯನ್ನುಂಟುಮಾಡಬಹುದಾದ ಯಾವದೇ ವಿಷಯಕ್ಕೆ ಈಗ ಆಸ್ಪದವನ್ನು ಕೊಡದಿರಲಿಕ್ಕೆ ಬದ್ಧನಾಗಿರುವನು. ಹಳ್ಳಿಗಳ ಪ್ರದೇಶಗಳಲ್ಲಿ ಸರಕಾರೀ ನೌಕರಿಯಲ್ಲಿರುವ ಸಹಸ್ರಾವಧಿ ಜನರು ಈ ಪ್ರಕಾರದ ಉಪಕಾರ ಮಾಡುವ ಭಾವನೆಯನ್ನು ತಮ್ಮ ಧರ್ಮವೆಂದು ತಿಳಿದರೆ, ಗ್ರಾಮಗಳ ಕೆಲಸದಲ್ಲಿ ಹೆಚ್ಚಿನ ಸಂಘಟನೆಯ ಆವಶ್ಯಕತೆಯೇ ಉಳಿಯಲಾರದು. ಈ ಮೇರೆಗೆ ಉದಾಹರಣೆಯನ್ನು ಹಾಕಿಕೊಟ್ಟರೆ, ಬೇರೆ ಯಾವ ಸಹಾಯವೂ ಅವಶ್ಯವಾಗಲಿಕ್ಕಿಲ್ಲ.